

ಸನ್ನಿ ಜ್ವರದಿಂದ ತೀರಿಹೋಗುವವನು. ಈಕೆಯೂ ಆಗತಾನೆ ಪಲ್ಲವಿಸುತ್ತಿದ್ದ ತರುಣಿ. ಯಥಾಪ್ರಕಾರ ತಲೆ ಕೂದಲು ಬೋಳಿಸಿ 'ಮಡಿ' ಮಾಡಿಕೊಳ್ಳುವಂತೆ ದಾಕ್ಷಾಯಿಣಿಗೆ ಒತ್ತಡ ಹಾಕುತ್ತಾರೆ. ಅರ್ಧ ಶತಮಾನದ ನಂತರ ಕಥಾನಾಯಕಿ ಫಣಿಯಮ್ಮ ಎದುರಿಸಿದ ಸನ್ನಿವೇಶವನ್ನೇ ದಾಕ್ಷಾಯಿಣಿ ಎದುರಿಸುತ್ತಾಳೆ. ಆದರೆ ಇಬ್ಬರೂ ಅದನ್ನು ನಿರ್ವಹಿಸಿದ ರೀತಿಯಲ್ಲಿ ಭಿನ್ನತೆ ಇದೆ.

ಹಾಗೆ ಗಂಡ ಸತ್ತ ನಂತರದ ಬದುಕನ್ನು ಫಣಿಯಮ್ಮನಿಗಿಂತ ಭಿನ್ನವಾಗಿ ಕಟ್ಟಿಕೊಳ್ಳುವುದಕ್ಕೆ ಕಾಲದ ಬೆಂಬಲವೂ ಇದೆಯೆನ್ನಿ. ಅವಳ ವ್ಯಕ್ತಿತ್ವದ ಒರಟುತನ, ಹಟವಾದಿತನಗಳು ಅದಕ್ಕೆ ಸಹಾಯ ಮಾಡುತ್ತವೆ. ಲೇಖಕರೇ ಹೇಳುವಂತೆ ದಾಕ್ಷಾಯಿಣಿ 'ಬಲು ಲಕ್ಷಣವಾದ ಹೆಣ್ಣು ಅದು. ಹಾಗೆ ಶರೀರ ದಾರ್ಢ್ಯವೂ ಹೆಚ್ಚು. ಸ್ವಲ್ಪ ಗಡಸು-ಗಂಡುಬೀರಿತನವು ಇತ್ತು.' ಇವೆಲ್ಲ ಗುಣಗಳು ಒಟ್ಟಾಗಿ ಪ್ರವಾಹದ ವಿರುದ್ಧ ಈಜಲು ದಾಕ್ಷಾಯಿಣಿಗೆ ಬಲ ತುಂಬುತ್ತವೆ.

ಕಥಾನಾಯಕಿಯಾದ ಫಣಿಯಮ್ಮನ ಪಾತ್ರದೊಂದಿಗೆ ದಾಕ್ಷಾಯಿಣಿ ಪಾತ್ರವನ್ನು ಇಟ್ಟು ನೋಡಲು ಸಾಧ್ಯವಿದೆ. ಕಾದಂಬರಿಯನ್ನು ಓದುವಾಗ ಈ ಹೋಲಿಕೆಯು ಸಹಜವಾಗಿಯೇ ಮನಸ್ಸಿನಲ್ಲಿ ಹಾದು ಹೋಗುತ್ತದೆ. ಫಣಿಯಮ್ಮನ ಕುರಿತಾದ ಸಹಾನುಭೂತಿ, ಆಕೆ ಎದುರಿಸಿದ ಪರಿಸ್ಥಿತಿಗಳ ಬಗ್ಗೆ ಓದುಗರ ಮನದಲ್ಲಿ ಮೂಡುವ ಸಿಟ್ಟು, ಬೇಸರಕ್ಕೆ ಒಂದು ರೀತಿಯಲ್ಲಿ ಉತ್ತರದಂತೆ ದಾಕ್ಷಾಯಿಣಿಯ ಪಾತ್ರವು ಬೆಳೆಯುತ್ತ ಹೋಗುತ್ತದೆ. ಯಾಕೆಂದರೆ ಇಬ್ಬರೂ ಒಂದೇ ರೀತಿಯ ಸಂದರ್ಭವನ್ನು ಎದುರಿಸಿದವರು. ಎಂಟು ವರ್ಷದ ಫಣಿಯಮ್ಮನ ಗಂಡ